# ಆರು ಹಿತವರು ನಿಮಗೆ ಮೂರು ಮಂದಿಗಳೊಳಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 49.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 187.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 75.
4. **Note:** Lyrics in given without highlights are as per Ref. 1. The wordings in Ref. 2 are similar to Ref. 1. In Ref. 3 the wordings are slightly different and are not considered here.
5. **Note:** Singer has followed lyrics as in Ref. 1.
6. **Note:** Ankita is different in these books. We have considered Ref.3 as standard and taken that Ankita for listing.

ರಾಗ: ಮುಖಾರಿ ತಾಳ: ಝಂಪೆ

ಆರು ಹಿತವರು ನಿಮಗೆ ಮೂರು ಮಂದಿಗಳೊಳಗೆ ?
ನಾರಿಯೊ ಧಾರಿಣಿಯೊ ಬಲು ಧನದ ಸಿರಿಯೊ ? || ಪ ||

ಅನ್ಯರಲಿ ಜನಿಸಿರ್ದ ಅಂಗನೆಯ ಕರೆತಂದು
ತನ್ನ ಮನೆಗವಳ ಯಜಮಾನಿಯೆನಿಸಿ
ಭಿನ್ನವಲ್ಲದಲರ್ಧ ದೇಹವೆನಿಸುವ ಸತಿಯು
ಕಣ್ಣಿನಲಿ ನೋಡಲಮ್ಮಳು ಕಾಲವಶದಿ || 1 ||

ಮುನ್ನ ಶತಕೋಟಿ ರಾಯರುಗಳಾಳಿದ ನೆಲವ
ತನ್ನದೆಂದೆನುತ ಶಾಸನವ ಬರೆಸಿ
ಬಿನ್ನಣದ ಮನೆಕಟ್ಟಿ ಕೋಟೆ ಕೊತ್ತಳವಿಕ್ಕಿ
ಚೆನ್ನಿಗನಸುವಳಿಯೆ ಹೊರಗೆ ಹಾಕುವರು || 2 ||

ಉದ್ಯೋಗ ವ್ಯವಹರ ನೃಪಸೇವೆ ಕುಶಲಗತಿ

ಕ್ಷುದ್ರತನ ಕಳವು ಪರದ್ರೋಹದಿಂದ
ಬುದ್ಧಿಯಿಂದಲೆ ಗಳಿಸಿ ಸಿಕ್ಕಿದಂಥರ್ಥವನು
ಸದ್ಯದಲ್ಲಾರು ಉಂಬುವರು ಹೇಳು ಮನುಜ || 3 ||

ಶೋಕವನು ಗೈಯುವರು ಸತಿಸುತರು ಬಾಂಧವರು
ಜೋಕೆ ತಪ್ಪಿದ ಬಳಿಕ ಅರ್ಥ ವ್ಯರ್ಥ
ಲೋಕದೊಳು ಗಳಿಸಿರ್ದ ಪುಣ್ಯ ಪಾಪಗಳೆರಡು
ಸಾಕಾರವಾಗಿ ಸಂಗಡ ಬಾಹೋದಲ್ಲದೆ || 4 ||

ಅಸ್ಥಿರದ ದೇಹವನು ನೆಚ್ಚಿ ನಂಬಿರ ಬೇಡ
ಸ್ವಸ್ಥದಲಿ ನೆನೆ ಕಂಡ್ಯ ಹರಿ ಪಾದವ
ಚಿತ್ತದೊಳು ಶುದ್ಧಿಯಿಂ ಪುರಂದರವಿಠಲನೇ
ಉತ್ತಮೋತ್ತಮನೆಂದು ಸುಖಿಯಾಗು ಮನುಜ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶಾಶ್ವತವಾದದ್ದೆಂದು ಭ್ರಮಿಸಿ ನಾವು ಪೋಷಿಸುತ್ತ ಹೋಗುವ ಕಾಮ, ಅರ್ಥ, ಅಧಿಕಾರ ಇವು ಯಾವುವೂ ನಮಗೆ ಕೊನೆಯಲ್ಲಿ ಸುಖವನ್ನು ತಂದುಕೊಡಲಾರವು ಎಂಬ ಭಾವವನ್ನು ಬಿಂಬಿಸುವ ಪದ ಇದು.

ಈ ಹಾಡಿನಲ್ಲಿ ಮನುಷ್ಯನನ್ನು ಮರುಳುಗೊಳಿಸಿ ಅವಿವೇಕಕ್ಕೆ ತೊಡಗಿಸುವ ಹೆಣ್ಣು - ಹೊನ್ನು - ಮಣ್ಣು ಈ ಮೂರರ ವೈಯರ್ಥ್ಯವನ್ನು ವಿಶದವಾಗಿ ಉದಾರಣೆಗಳೊಂದಿಗೆ ದಾಸರು ಹೇಳಿದ್ದಾರೆ.

**ನೋಡಲಮ್ಮಳು ಕಾಲವಶದಿ** – ಕಾಲ ಕಳೆದಂತೆ ಕಣ್ಣೆತ್ತಿ ನೋಡಲು ಕೊಡಬಯಸಳು, ಅಮ್ಮು, ಅಣ್ಮು, ಬಯಕೆ.

**ಬಿನ್ನಣದ ಮನೆ** – ಚೊಕ್ಕವಾದ, ಚೆಲುವಾದ ಮನೆ (ಬಿನ್ನಣ, ಬಿನ್ನಾಣ; ವಿಜ್ಞಾನದ ತದ್ಭವ).

**ಚೆನ್ನಿಗನು ಅಸುವಳಿಯೆ** – ಚೆಲುವನು ಪ್ರಾಣಬಿಟ್ಟರೆ.

**Classification:** Keerthane
**Ankita:** purandara vittala
**Location:** NA

**Category:** Loka Neeti, Jeevana Sambodhane, Jeevanoddhara
**Sub-Category:** jana, huttu, patni, mane, deha, kannu, yama, ooru, bhumi, rokka, arasa, kalla, nara, buddi, makkalu, loka, punya, papa, Krishna, chitta, sukha, paramatma, shasana,
**Pravachana:** NA
**Explanation:** Dr. A.B. Shamachar